ಮಧ್ಯದಿಂದ ಒಬ್ಬ ಹುಡುಗ, ಹುಡುಗಿ ಪೇಟೆಯ ಒಂದು ಅಂಗಡಿಯಲ್ಲಿ ಬಂದು ಸೇರಿದರು. ಇವನ ಕೇಶ ವಿನ್ಯಾಸ ಮತ್ತು ಅವಳ ಸಡಿಲಾದ ಪೈಜಾಮಿನಿಂದ ಆ ಇಬ್ಬರು ಸಿಖ್‌ರೆಂದು ತಿಳಿಯುತ್ತಿತ್ತು. ಆತ ತನ್ನ ಮಾಮಾನ ಕೇಶ ತೊಳೆಯಲು ಮೊಸರು ತೆಗೆದುಕೊಂಡು ಹೋಗಲು ಬಂದಿದ್ದ ಮತ್ತು ಇವಳು ಅಡುಗೆಗಾಗಿ ತರಕಾರಿ. ಅಂಗಡಿಕಾರ ಸೇರು ಹಸಿ ಹಪ್ಪಳಗಳ ಬಂಡಲನ್ನು ಎಣಿಸದೆ ಅಲ್ಲಿಂದ ಕದಲಲು ತಯಾರಿಲ್ಲದ ಒಬ್ಬ ವಿದೇಶಿಯೊಂದಿಗೆ ವಾದಮಾಡುತ್ತಿದ್ದ.

'ನಿನ್ನ ಮನೆ ಎಲ್ಲಿದೆ?'

'ಮಗರೆಯಲ್ಲಿ, ಮತ್ತೆ ನಿನ್ನದು?'

'ಮಾಝೆಯಲ್ಲಿ, ಇಲ್ಲಿ ಎಲ್ಲಿ ಇರುತ್ತಿಯಾ?'

'ಅಂತರಸಿಂಹರ ಚಾವಡಿಯಲ್ಲಿ, ನನಗೆ ಮಾಮಾ ಆಗಬೇಕು.'

'ನಾನು ಮಾಮಾನ ಹತ್ತಿರ ಬಂದಿದ್ದೇನೆ, ಅವರ ಮನೆ ಗುರುಬಾಜಾರಿನಲ್ಲಿದೆ.' ಅಷ್ಟರಲ್ಲಿ ಅಂಗಡಿಯವ ತನ್ನ ವ್ಯವಹಾರ ಮುಗಿಸಿದನು ಮತ್ತು ಇವರಿಗೆ ಸಾಮಾನುಗಳನ್ನು ಕೊಡತೊಡಗಿದನು. ಸಾಮಾನು ತೆಗೆದುಕೊಂಡು ಇಬ್ಬರೂ ಜೊತೆಯಲ್ಲಿ ಹೊರಟರು. ತುಸು ದೂರ ಹೋದಮೇಲೆ ಹುಡುಗ ನಕ್ಕು ಕೇಳಿದ, 'ನಿನ್ನ ನಿಶ್ಚಿತಾರ್ಥ ಆಯಿತೆ?' ಇದನ್ನು ಕೇಳಿ ಹುಡುಗಿ ಅವಾಕ್ ದೃಷ್ಟಿಯಿಂದ ಹುಬ್ಬೇರಿಸಿ 'ಧತ್' ಎಂದು ಓಡಿ ಹೋದಳು ಮತ್ತು ಹುಡುಗ ಬೆರಗಾಗಿ ನಿಂತುಕೊಂಡನು.

ಮಾರನೆ ದಿನ ಮತ್ತೆ ಅದರ ಮರುದಿನ ತರಕಾರಿಯವನ ಹತ್ತಿರ ಅಥವಾ ಹಾಲಿನವನ ಹತ್ತಿರ ಇಬ್ಬರೂ ಭೇಟಿಯಾಗುತ್ತಾರೆ. ಪೂರ್ತಿ ತಿಂಗಳು ಇದೇ ನಡೆದಿತ್ತು. ಎರಡು-ಮೂರು ಬಾರಿ ಹುಡುಗ ಮತ್ತೇ ಕೇಳಿದ 'ನಿನ್ನ ನಿಶ್ಚಿತಾರ್ಥ ಆಯಿತೆ?' ಮತ್ತೆ ಅದೇ 'ಧತ್' ಉತ್ತರವಾಗಿ ಸಿಕ್ಕಿತು. ಒಂದು ದಿನ ಮತ್ತೆ ಹುಡುಗ ಅದೇ ನಗುವಿನೊಂದಿಗೆ ಛೇಡಿಸಲು ಹುಡುಗನ ಕಲ್ಪನೆಗೆ ವಿರುದ್ಧವಾಗಿ ಅವಳು ಹೇಳಿದಳು- 'ಹೌದು'.

'ಯಾವಾಗ?' 'ನಿನ್ನೆ. ಕಾಣಿಸುತ್ತಿಲ್ಲವೆ ರೇಶಿಮೆಯಿಂದ ಕಸೂತಿ ಮಾಡಿದ ಶಾಲು'. ಹುಡುಗಿ ಓಡಿ ಹೋದಳು. ಹುಡುಗ ಮನೆಯ ಹಾದಿ ಹಿಡಿದ. ಹಾದಿಯಲ್ಲಿ ಒಬ್ಬ ಹುಡುಗಿಯನ್ನು ಚರಂಡಿಗೆ ನೂಕಿದ, ಗಲ್ಲಿಗಲ್ಲಿಗಳಲ್ಲಿ ತಿರುಗಿ ವ್ಯಾಪಾರ ಮಾಡುವವನ ದಿನಪೂರ್ತಿಯ ಗಳಿಕೆಯನ್ನು ಹಾಳು ಮಾಡಿದ. ಒಂದು ನಾಯಿಗೆ ಕಲ್ಲೆಸೆದ ಮತ್ತು ಒಬ್ಬ ಎಲೆಕೋಸು ಮಾರುವವನ ತಳ್ಳುಗಾಡಿಯಲ್ಲಿ ಹಾಲು ಸುರಿದು ಬಿಟ್ಟನು. ಸ್ನಾನ ಮಾಡಿ ಎದುರಿಗೆ ಬರುತ್ತಿದ್ದ ಒಬ್ಬ ವೈಷ್ಣವಿ ಹೆಣ್ಣುಮಗಳಿಗೆ ಡಿಕ್ಕಿ ಹೊಡೆದು ಕುರುಡನೆಂಬ ಪದವಿ ಪಡೆದನು. ಅನಂತರ ಮನೆ ತಲುಪಿದನು.

## 2

'ರಾಮ-ರಾಮ, ಇದೂ ಒಂದು ಯುದ್ಧವೆ! ಹಗಲು-ರಾತ್ರಿ ಕಣಿವೆಗಳಲ್ಲಿ ಕೂತು ಮೂಳೆಗಳೆಲ್ಲ ಸೆಟೆದು ಹೋದವು. ಲುಧಿಯಾನಾದಲ್ಲಿಗಿಂತ ಹತ್ತು ಪಟ್ಟು ಚಳಿ, ಮಳೆ ಮತ್ತು ಮೇಲಿಂದ ಹಿಮಪಾತ. ಶರೀರ ಮೀನಖಂಡಗಳವರೆಗೆ ಕೆಸರಿನಲ್ಲಿ ಸಿಕ್ಕಿಕೊಂಡಿದೆ. ವೈರಿ ಎಲ್ಲಿಯೂ ಕಾಣಿಸುವುದಿಲ್ಲ... ತಾಸು...ಎರಡು ತಾಸಿಗೊಮ್ಮೆ ಕಿವಿಯ ಪರದೆ ಹರಿದು ಹೋಗುವಂಥ ಜೋರಾದ ಸದ್ದಿನೊಂದಿಗೆ ಪೂರ್ತಿ ಕಣಿವೆ ಕಂಪಿಸುತ್ತದೆ ಮತ್ತು ಭೂಮಿ ನೂರು-ನೂರು ಗಜ ಮೇಲಕ್ಕೆ ಜಿಗಿದು ಬಿಡುತ್ತದೆ. ಈ ಗುಪ್ತ ಗುಂಡಿನ ದಾಳಿಯಿಂದ ಬದುಕುಳಿದರೆ ತಾನೇ ಯಾರಾದರೂ ಹೋರಾಡುವದು. ನಗರಕೋಟನ ಭೀಕರ ಭೂಕಂಪದ ಬಗ್ಗೆ ಕೇಳಿದ್ದೆ. ಇಲ್ಲಿ ದಿನಕ್ಕೆ ಇಪ್ಪತ್ತೈದು ಬಾರಿ ಭೂಕಂಪವಾಗುತ್ತದೆ. ಅಕಸ್ಮಾತ ಕಣಿವೆಯಿಂದ ಪಗಡಿ ಅಥವಾ ಮೊಣಕೈ ಹೊರಗೆ ಬಂದರೆ ತಕ್ಷಣ ಫಟಾಫಟ್ ಗುಂಡು ತಗಲುತ್ತದೆ. ಭ್ರಮಾತ್ಮಕ ಮಣ್ಣಿನಲ್ಲಿ ಮಲಗಿದ್ದೇವೆಯೊ ಇಲ್ಲಾ ಹುಲ್ಲಿನಲ್ಲಿ ಅಡಗಿಕೊಂಡಿರುತ್ತೇವೇಯೊ ಗೊತ್ತಿಲ್ಲ.

'ಲಹನಾಸಿಂಹ ಇನ್ನು ಮೂರು ದಿನಗಳಿವೆ. ನಾಲ್ಕು ದಿನಗಳನ್ನು ಕಣಿವೆಯಲ್ಲಿಯೇ ಕಳೆದೆವು. ನಾಡಿದ್ದು 'ರಿಲೀಫ್' ಬರುತ್ತದೆ ಮತ್ತು ಏಳು ದಿನಗಳ ರಜೆ. ನಮ್ಮ ಕೈಗಳನ್ನು ಸೀದಾ ಮಾಡಿಕೊಳ್ಳುವೆವು ಮತ್ತು ಹೊಟ್ಟೆತುಂಬ ತಿಂದು ಮಲಗಿರುವೆವು, ಆ ಫಿರಂಗಿ ಮೇಮಳ ತೋಟದಲ್ಲಿ... ಮಖಮಲಿನ ಹಸಿರು ಹುಲ್ಲಿದೆ. ಹಣ್ಣು ಮತ್ತು ಹಾಲಿನ ಮಳೆಗರೆಯುತ್ತಾಳೆ. ಸಾವಿರ ಸರ್ತಿ ಹೇಳಿದರೂ ಹಣ ತೆಗೆದುಕೊಳ್ಳುವುದಿಲ್ಲ. ನೀನು ರಾಜ, ದೇಶ ರಕ್ಷಿಸಲು ಬಂದಿದ್ದೀಯಾ.. ಎಂದು ಹೇಳುತ್ತಾಳೆ.'

'ನಾಲ್ಕು ದಿನಗಳವರೆಗೆ ಕಣ್ಣು ಮುಚ್ಚಲಾಗಲಿಲ್ಲ. ತಿರುಗಾಡಿಸದೆ ಕುದುರೆ ಕೆಡುತ್ತದೆ ಮತ್ತು ಯುದ್ಧ ಮಾಡದೆ ಸೈನಿಕ. ನನಗಂತೂ ಬಂದೂಕು ಹೆಗಲಿಗೇರಿಸಿಕೊಂಡು ಮಾರ್ಚ್ ಮಾಡಲು ಆದೇಶ ಸಿಗಲಿ. ಆಗ ಏಳು ಜರ್ಮನಿಯರನ್ನು ಒಬ್ಬನೆ ಕೊಂದು